ಇ) ಈ ಯೋಜನೆಯಿಂದ ಎಷ್ಟು ಸಾವಿರ ಎಕರೆ ನೀರಾವರಿಯಾಗುವುದು ಹಾಗೂ ಇದರಿಂದ ಲಾಭವಾಗುವ ಹಳ್ಳಿಗಳು ಯಾವುವು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ರೂ. 212.414 ಲಕ್ಷಗಳು (ಪ್ರಾಥಮಿಕ ತನಿಖಾ ವರದಿ ಮೇರೆಗೆ).

ಆ) ಇಲ್ಲ. ಈ ಯೋಜನೆಯ ವಿವರವಾದ ತನಿಖೆ ನಡೆಯುತ್ತಿದ್ದು ಶಕ್ತ್ಯಾನುಸಾರ ಮತ್ತು ಹಣದ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಗಣಿಸಲಾಗುವುದು.

ಇ) ಸುಮಾರು 4000ಎಕರೆಗಳು ಈ ಯೋಜನೆಯಿಂದ ಲಾಭ ಪಡೆಯುವ ಹಳ್ಳಿಗಳು. 1. ಕನಸಗೇರಿ 2. ಸೀಗಿಹೊಳೆ 3. ಉರುಬಿನ ಪಟ್ಟಿ 4. ಬೆಂಚನಮರಡಿ 5. ಈರನಟ್ಟಿ 6. ಅಕ್ಕ ತಂಗಿಯರ ಹಾಳ 7. ಮಡಿವಾಳ 8. ದಾಸನಟ್ಟಿ ಮತ್ತು 9. ಗದ್ದಿಹೊಳೆ.

ಎಲ್.ಓ.ಸಿ.ಗಾಗಿ ಪ್ರತಿ ಜಿಲ್ಲೆಗಳಿಗೆ ಬಿಡುಗಡೆಯಾದ ಹಣ

498 (1179): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ 3 ತಿಂಗಳುಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಎಲ್.ಓ.ಸಿ. ಗಾಗಿ ಬಿಡುಗಡೆ ಮಾಡಿದ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಎಲ್.ಓ.ಸಿ. ಬಿಡುಗಡೆ ಮಾಡಿದ ಮೇಲೆ ಮುಖ್ಯ ಅಭಿಯಂತರು ಎಲ್.ಓ.ಸಿ. ಉಪಯೋಗ ಮಾಡಿದ ವಸ್ತುಗಳ ಖರೀದಿಗಾಗಿ ಮಾತ್ರ ಹಣ ವಿನಿಯೋಗಿಸಿದ್ದು ಇದಕ್ಕೆ ಸರ್ಕಾರದ ಕಡಿವಾಣವೇನು;

ಇ) ರಸ್ತೆಗಳ ಹಾಗೂ ಸಾರ್ವಜನಿಕ ಕೆಲಸಗಳನ್ನು ಮಾಡುವುದಕ್ಕಾಗಿ ಉಪಯೋಗಿಸಬೇಕಾದ ಹಣವನ್ನು ಮನಸಾರೆ ಖರ್ಚು ಮಾಡಿದ್ದು ಇದರಿಂದ ಸಾರ್ವಜನಿಕರ ಉಪಯೋಗಕ್ಕಾಗಿ ಖರ್ಚು ಮಾಡಬೇಕಾಗಿರುವ ಹಣವನ್ನು ಸರ್ಕಾರಿ ಆದೇಶದ ವಿರುದ್ಧ ಖರ್ಚು ಮಾಡಿದ ಅಧಿಕಾರಿಗಳ ವಿರುದ್ಧ ಯಾವ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು;

ಈ) ಕಳೆದ 3 ತಿಂಗಳುಗಳಲ್ಲಿ ಲೋಕೋಪಯೋಗಿ ಇಲಾಖೆ ಉತ್ತರ ವಲಯಕ್ಕೆ ಪ್ರತಿ ತಿಂಗಳು ಎಷ್ಟು ಎಲ್.ಓ.ಸಿ.ಗಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು ಖರ್ಚು ಮಾಡಲಾಗಿರುವ ಉದ್ದೇಶ ಯಾವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಕಳೆದ 3 ತಿಂಗಳಿನಲ್ಲಿ ಒಟ್ಟು 2038.44 ಲಕ್ಷ ರೂ.ಗಳ ಹಣ ಭರವಸೆ ಪತ್ರಗಳನ್ನು ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ).

ಆ) ಮುಖ್ಯ ಅಭಿಯಂತರವರು ಕಾರ್ಯಪಾಲಕ ಅಭಿಯಂತರವರಿಗೆ ಕೆಲಸದ ಬಿಲ್ಲುಗಳ ಪಾವತಿಗಾಗಿ ವಿನಿಯೋಗಿಸಿಕೊಳ್ಳಲು ಬೇಡಿಕೆ ಆದರಿಸಿ ಬಿಡುಗಡೆ ಮಾಡುತ್ತಾರೆ. ವಸ್ತುಗಳ ಖರೀದಿಗಾಗಿ ಮಾತ್ರವೇ ಹಣ ವಿನಿಯೋಗಿಸುವುದಕ್ಕೆ ಅವಕಾಶ ಇರುವುದಿಲ್ಲ.

ಇ) ಇಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ. ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದಲ್ಲಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉತ್ತರ ವಲಯಕ್ಕೆ ಒಟ್ಟು 972.44 ಲಕ್ಷ ರೂ.ಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಮಂಜೂರಾದ ಕಾಮಗಾರಿಗಳ ಬಿಲ್ಲುಗಳನ್ನು ತೀರುವಳಿ ಮಾಡಲು ಖರ್ಚು ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ 1179ಕ್ಕೆ ಅನುಬಂಧ

ಜಿಲ್ಲೆಗಳು	ಕಳೆದ ಮೂರು ತಿಂಗಳಲ್ಲಿ (ನವೆಂಬರ್ 92) ಡಿಸೆಂಬರ್ 92 ಹಾಗೂ (ಜನವರಿ 93)ರಲ್ಲಿ ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರ
	(ಲಕ್ಷ ರೂ.ಗಳಲ್ಲಿ)
1. ದಕ್ಷಿಣ ವಲಯ	
1. ಬೆಂಗಳೂರು	390.01
2. ಮೈಸೂರು	170.86
3. ಕೋಲಾರ	43.68
4. ತುಮಕೂರು	41.97
5. ಮಂಡ್ಯ	49.66
6. ಹಾಸನ	92.90
7. ಚಿಕ್ಕಮಗಳೂರು	48.60
8. ದಕ್ಷಿಣ ಕನ್ನಡ	35.75
9. ಕೊಡಗು	24.00
10. ಶಿವಮೊಗ್ಗ	101.67
11. ಚಿತ್ರದುರ್ಗ	66.00
ಒಟ್ಟು	1066.00
2. ಉತ್ತರ ವಲಯ	
1. ಧಾರವಾಡ	216.63
2. ಉತ್ತರ ಕನ್ನಡ	62.80
3. ಬೆಳಗಾಂ	166.56
4. ಬಿಜಾಪುರ	107.04
5. ಗುಲ್ಬರ್ಗಾ	86.76
6. ಬೀದರ್	70.52
7. ಬಳ್ಳಾರಿ	125.75
8. ರಾಯಚೂರು	136.38
ಒಟ್ಟು	972.44

ರಾಜ್ಯದ ಪಿ.ಡಬ್ಲ್ಯೂ.ಡಿ ರಸ್ತೆಗಳ ರಿಪೇರಿಗಾಗಿ ಬಿಡುಗಡೆಯಾದ ಹಣ

502 (1119): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 1992–93ನೇ ವರ್ಷದಲ್ಲಿ ಪಿಡಬ್ಲ್ಯೂಡಿ ರಸ್ತೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು; ಹಾಗೂ ಖರ್ಚಾಗಿರುವ ಹಣವೆಷ್ಟು;